SRI M. VEERAPPA MOILY (Minister for Finance and Planning). Sir I beg to move

"That the Karnataka Taxation Laws (Amendment) Bill, 1980 be passed."

CHAIRMAN —The question is

"That the Karnataka Taxation Laws (Amendment) Bill, 1980 be passed."

The motion was adopted and the bill was passed

KARNATAKA STAMP (AMENDMENT) BILL 1980

CHAIRMAN.—Now, Sri S. Bangarappa, Hon. Minister for Revenue and Agriculture to move the Karnataka Stamp (Amendment) Bill, 1980.

SRI S. BANGARAPPA (Minister for Revenue and Agriculture)

Motion to Consider

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆ ೧೯೮೦ನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

The question was proposed

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಿಜಿಸ್ಟ್ರೇಷನ್ ತಿದ್ದುಪಡಿ ಆಕ್ಟ್ ಮತ್ತು ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆ ಎರಡನ್ನೂ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ. ಎರಡೂ ಕೂಡ ಒಂದೇ ಡಾಕ್ಯುಮೆಂಟಿಗೆ ಸಂಬಂಧಪಟ್ಟದ್ದು.

ಶ್ರೀ ಬಿ. ಬಸವಲಿಂಗಪ್ಪ.— ಒಂದೊಂದೇ ಪ್ರತ್ಯೇಕವಾಗಿ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ನನ್ನದು ಅಭ್ಯಂತರ ಏನೂ ಇಲ್ಲ.

ಛೇರ್ಮನ್.—ಇಬ್ಬರೂ ಅನುಕೂಲಕ್ಕೆ ತಕ್ಕಂತೆ ವ್ಯವಹರಿಸಬಹುದು.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ೧೯೮೦ರ ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆಯಲ್ಲಿ ಈಗ ಇರತಕ್ಕಂಥ ಕಾನೂನಿಗೆ ಳಿಓ (ಎ) ಸೆಕ್ಷನ್ ಸೇರಿಸಬೇಕೆಂದು ತಿದ್ದುಪಡಿ ತರುತ್ತಿದ್ದೇವೆ. ಕಾರಣ ಏನೆಂದರೆ, ರಾಜ್ಯದ ಅನೇಕ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಸಾವಿರಾರು ಪತ್ರಗಳು ರಿಜಿಸ್ಟರ್ ಆಗಿವೆ. ರಿಜಿಸ್ಟರ್ ಆಗತಕ್ಕ ಸಂದರ್ಭದಲ್ಲಿ ಏನಾಗಿದೆ ಅಂದರೆ ಕೆಲವು ರಿಜಿಸ್ಟರ್ ಆಗತಕ್ಕಂಥ ಪತ್ರಗಳಲ್ಲಿ ಅಕೌಂಟೆಂಟ್ ಜನರಲ್ ಆಫೀಸಿನ ಲೆಕ್ಕಪರಿಶೋಧಕ ವಿಭಾಗದವರು ಹೋಗಿ ವಿಚಾರ ಮಾಡಿದಾಗ ಕೆಲವು ನಾನ್-ಲೆವಿ ಡಾಕ್ಯುಮೆಂಟ್ಸ್ ಸಿಕ್ಕಿವೆ. ಕೆಲವು ಕಡೆಗಳಲ್ಲಿ ಹೆಚ್ಚು ಸ್ಟಾಂಪ್ ಕೊಟ್ಟಿರತಕ್ಕಂಥಾದ್ದು ; ತಪ್ಪು ತಪ್ಪಾಗಿ ಲೆವಿ ಸ್ಟಾಂಪ್ ಡ್ಯೂಟಿ ಕೊಟ್ಟಿರತಕ್ಕಂಥದ್ದು ಕೂಡ ಗಮನಕ್ಕೆ ಬಂದಿದೆ. ಕೆಲವು ಸಾರಿ misclassification of documents ಆಗಿ ಪತ್ರ ಏನು ರಿಜಿಸ್ಟರ್ ಆಗಿದೆ ಅದು ಕಾನೂನು ಪ್ರಕಾರ ಸರಿಯಾಗಿ ಆಗಿಲ್ಲ. ವರ್ಗೀಕರಣ ಮಾಡತಕ್ಕ ಸಂದರ್ಭದಲ್ಲಿ ಸರಿಯಾಗಿ ಮಾಡಿಲ್ಲ, ಪದಗಳನ್ನು ಇಂಟರ್‌ಪ್ರಿಟ್ ಮಾಡುವಾಗ ಅಲ್ಲಿರತಕ್ಕ ವಾಕ್ಯಗಳ ಬಗ್ಗೆ ಬೇರೆ ರೀತಿಯ ಅರ್ಥ ಕಲ್ಪಿಸಿ ಸ್ಟಾಂಪ್ ಡ್ಯೂಟಿ ವ್ಯತ್ಯಾಸಗಳಾಗಿವೆ, ಹೀಗೆಲ್ಲಾ ಆಗಿದೆ ಎಂದು ಅಕೌಂಟೆಂಟ್ ಜನರಲ್ ಆಫೀಸಿನವರು ನೋಡಿ ಸರ್ಕಾರದ ಗಮನಕ್ಕೆ ತಂದರು. ಕೆಲವು ಸಾರಿ ಪಾರ್ಟಿಗಳು ಬೇಕೆಂತಲೇ ಹಣ ಉಳಿಸುವ ದೃಷ್ಟಿಯಿಂದ

ಅವರಿಗೆ ಬೇಕಾದಂತೆ ಬರೆಸಿರುವುದೂ ಗಮನಕ್ಕೆ ಬಂದಿದೆ. ಕೆಲವು ಸಾರಿ ಬೇಕೆಂತಲೇ ಮಾಡಿದ್ದರೂ ಇನ್ನೂ ಕೆಲವು ಸಾರಿ ನಂಬಿಕೆಯಮೇಲೆ ಮಾಡಿದ್ದರಿಂದ ಕೆಲವು ತಪ್ಪುಗಳು ಆಗಿವೆ. ಆದ್ದರಿಂದ ಯಾರು ಯಾರು ಈ ರೀತಿ ಅನೇಕ ಕಾರಣಗಳಿಂದ ಕಡಿಮೆ ಸ್ಟ್ಯಾಂಪ್ ಡ್ಯೂಟಿ ಕೊಟ್ಟಿದ್ದಾರೆ ಅವರಿಂದ ಹಣವನ್ನು ವಸೂಲ ಮಾಡಬೇಕು ಎಂದು ಮಾಡಿದ್ದೇವೆ. ಕಂದಾಯ ಬಾಕಿ ನಮೂನೆಯಲ್ಲಿ ಯಾವರೀತಿ ವಸೂಲು ಮಾಡುತ್ತಾರೋ ಹಾಗೆ ವಸೂಲು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂದು ವಿಚಾರ ಮಾಡಿದಾಗ ಅದಕ್ಕೆ ಅವಕಾಶವಿರಲಿಲ್ಲ. ಅದಕ್ಕೋಸ್ಕರ ಈಗಿರತಕ್ಕ ಕಾನೂನಿಗೆ ಒಂದು ತಿದ್ದುಪಡಿ ತಂದು ೧೯೭೨ರ ನಂತರ ಇರತಕ್ಕ ಪತ್ರಗಳನ್ನು ನೋಡಿ ಎಲ್ಲೆಲ್ಲಿ ಅನ್ಯಾಯ ನಡೆದಿದೆ, ಎಲ್ಲೆಲ್ಲಿ ಲಕ್ಷಾಂತರ ರೂಪಾಯಿ ಹಣ ಸರ್ಕಾರಕ್ಕೆ ಬರುವುದು ಸೋರಿಹೋಗಿದೆ ಅದನ್ನು ವಸೂಲು ಮಾಡುವಂತೆ ಮಾಡಲಾಗಿದೆ. ೧೯೭೨ರ ಹಿಂದಿರತಕ್ಕಂಥ ಡಾಕ್ಯುಮೆಂಟ್‌ಗಳನ್ನು ಯಾವುದೂ ನೋಡಬಾರದೆಂದೂ ಮಾಡಿದ್ದೇವೆ. ಸೆಕ್ಷನ್ ೪೬(ಎ)ಗೆ ತಿದ್ದುಪಡಿ ತಂದು ಅದರ ಜೊತೆಗೆ ಸೆಕ್ಷನ್ ೧೧ಕ್ಕೂ ಕೂಡ ತಿದ್ದುಪಡಿಯನ್ನು ತರುವ ವಿಚಾರದಲ್ಲಿ ಕಾನೂನು ತಂದಿದ್ದೇವೆ. ಒಂದು ಒಳ್ಳೆಯ ಉದ್ದೇಶದಿಂದಲೇ ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತಂದಿರುವುದರಿಂದ ಇದರ ಬಗ್ಗೆ ಹೆಚ್ಚಿನ ಚರ್ಚೆ ಆಗಲಾರದು ಎಂದುಕೊಂಡಿದ್ದೇನೆ. ಇದರಲ್ಲಿ ಪಾರ್ಟಿಗಳಿಗೆ ತೊಂದರೆಯಾದರೆ ಒಂದು ವೇಳೆ ಅನ್ಯಾಯವಾದರೆ ಚೀಫ್ ಕಂಟ್ರೋಲಿಂಗ್ ರೆವಿನ್ಯೂ ಅಥಾರಿಟಿಯವರು ರೆಪ್ರಸೆಂಟೇಷನ್ ತೆಗೆದುಕೊಂಡು ಪರಿಹಾರ ಮಾಡಬೇಕು ಎಂದೂ ಮಾಡಿದ್ದೇವೆ. ಒಂದೇ ಸಾರಿಗೆ ಪಾರ್ಟಿಗಳಿಗೆ ಅನ್ಯಾಯವಾಗಬಾರದು. ಮತ್ತೆ ಅವರ ವಾದವನ್ನು ಕೇಳಬೇಕು ಎಂಬ ದೃಷ್ಟಿಯಿಂದ ಆಜ್ಞೆಯಾಗಿ ೩ ತಿಂಗಳೊಳಗಾಗಿ ಕರ್ನಾಟಕ ಅಪಲೆಟ್ ಟ್ರಿಬ್ಯುನಲ್‌ಗೆ ಅಪೀಲ್ ಹೋಗುವುದಕ್ಕೂ ಅವಕಾಶ ಇಟ್ಟಿದ್ದೇವೆ. ಆದ್ದರಿಂದ ಅನ್ಯಾಯವಾಗಿದೆಯೆಂದು ಒಂದೇ ಸಾರಿಗೆ ಎಲ್ಲರಿಗೂ ನೋಟಿಸ್ ಕೊಟ್ಟು ವಸೂಲು ಮಾಡಬೇಕು ಎಂಬ ಉದ್ದೇಶದಿಂದ ಮಾತ್ರ ಮಾಡಿಲ್ಲ, ಎಲ್ಲೆಲ್ಲಿ ಅನ್ಯಾಯವಾಗಿದೆ ಎಂಬುದನ್ನು ಮಾತ್ರ ನೋಡಿ ವಸೂಲು ಮಾಡಲಾಗುವುದು. ಮತ್ತು ಅವರಿಗೆ ಅಸಮಾಧಾನವಾದರೆ ಕರ್ನಾಟಕ ಅಪಲೆಟ್ ಟ್ರಿಬುನಲ್‌ಗೆ ಅಪೀಲ್ ಹೋಗಬಹುದು. ಆದ್ದರಿಂದ ಯಾರಿಗೂ ಇದರಿಂದ ತೊಂದರೆಯಾಗುವುದಕ್ಕೆ ಅವಕಾಶವಿಲ್ಲ. ಸರ್ಕಾರಕ್ಕೆ ಬರತಕ್ಕ ಹಣ ಬಂದಿರುವುದರಿಂದ ಅದನ್ನು ವಸೂಲು ಮಾಡುವುದಕ್ಕೆ ಇದನ್ನು ತಂದಿದ್ದೇವೆ ಮಾನ್ಯ ಬಸವಲಿಂಗಪ್ಪನವರೂ ಇದನ್ನು ಒಪ್ಪುತ್ತಾರೆಂದು ನನ್ನ ನಂಬಿಕೆ. ಆಗಿರತಕ್ಕ ಅನ್ಯಾಯವನ್ನು ಸರಿಪಡಿಸತಕ್ಕ ದೃಷ್ಟಿಯಲ್ಲಿ ತಂದಿರತಕ್ಕ ಈ ತಿದ್ದುಪಡಿ ಮಸೂದೆಗೆ ಮಾನ್ಯ ಸದಸ್ಯರೂ ಕೂಡ ಒಪ್ಪಿಗೆ ಕೊಡುತ್ತಾರೆಂದು ನಂಬಿ ಈ ಸದನದ ಚರ್ಚೆಗಾಗಿ ಇದನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ. —ಎಲ್ಲಾ ವಿಷಯವನ್ನೂ ಸರಳವಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಳಟನೇ ಕಲಮಿನಲ್ಲಿ ಏನಿತ್ತು ಈಗ ತಿದ್ದುಪಡಿಯಿಂದ ಏನು ವ್ಯತ್ಯಾಸವಾಗುತ್ತದೆ ಎಂಬುದನ್ನು ಸಭೆಗೆ ತಿಳಿಸಿದರೆ ಉತ್ತಮ ಹಿಂದೆ ಏನು ಕಷ್ಟವಾಗಿತ್ತು, ಈಗ ತಿದ್ದುಪಡಿಯಿಂದ ಯಾವರೀತಿಯ ಅನುಕೂಲಗಳಾಗುತ್ತದೆಂಬುದನ್ನೂ ಸಭೆಗೆ ತಿಳಿಸಿದರೆ ಅನುಕೂಲವಾಗುತ್ತದೆ

ಶ್ರೀ ಎಸ್. ಬಂಗಾರಪ್ಪ —ಈಗಾಗಲೇ ನಾನು ಆದನ್ನು ಹೇಳಿದ್ದೇನೆ. ಸೆಕ್ಷನ್ ೪೬ ಇರಲಿ ಯಾವುದೇ ಇರಲಿ ಕಡಿಮೆ ಸ್ಟ್ಯಾಂಪ್ ಡ್ಯೂಟಿ ಕೊಟ್ಟಿರುವವರ ಹತ್ತಿರ ಸರಿಯಾಗಿ ಕೊಡಬೇಕಾದ ಸ್ಟ್ಯಾಂಪ್ ಡ್ಯೂಟಿ ಹಣವನ್ನು ವಸೂಲು ಮಾಡುವುದಕ್ಕೆ ಇದನ್ನು ಮಾಡಿದ್ದೇವೆ. ಒಂದು ಸಾರಿ ಕ್ರಯ ಪತ್ರ ಎಂದು ತಿಳಿದುಕೊಂಡರೆ ಇನ್ನೊಂದು ಸಾರಿ ಕ್ರಯ ಪತ್ರ ಆಗುವುದಿಲ್ಲ ಎಂಬ ಅಭಿಪ್ರಾಯ ಬಂದು ಆಗ ಸ್ಟ್ಯಾಂಪ್ ಡ್ಯೂಟಿ ವ್ಯತ್ಯಾಸವಾಗುತ್ತದೆ. ವ್ಯತ್ಯಾಸ ಆದಾಗ್ಯೂ ಕೊಡಬೇಕಾದ ಬಾಕಿ ಹಣವನ್ನು ವಸೂಲು ಮಾಡುವುದಕ್ಕೆ ಅವಕಾಶವಿರಲಿಲ್ಲ. ಈಗ ಆದನ್ನು ವಸೂಲು ಮಾಡುವ ದೃಷ್ಟಿಯಿಂದ ಇಲ್ಲಿ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ.

ಶ್ರೀ ಹೆಚ್. ಗಂಗಾಧರನ್(ಕೃಷ್ಣರಾಜ). —ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಂದಿರತಕ್ಕ ತಿದ್ದುಪಡಿ ಮಸೂದೆ ಒಳ್ಳೆಯದು. ಸ್ಟ್ಯಾಂಪ್ ಡ್ಯೂಟಿ ಕಡಿಮೆ ಕೊಟ್ಟಿದ್ದರೆ ಇದರಿಂದ ಸರ್ಕಾರಕ್ಕೆ ನಷ್ಟ ಆಗುವುದರಿಂದ ಆದನ್ನು ವಸೂಲು ಮಾಡಬೇಕು ಎಂದು ಹೇಳುವುದು ಒಳ್ಳೆಯದು. ಡಾಕ್ಯುಮೆಂಟ್ಸ್ ರಿಜಿಸ್ಟ್ರೇಷನ್‌ಗೆ ಹೋದಾಗ ಇಂಟರ್‌ಪ್ರಿಟ್ ಮಾಡಿ ಕಡಿಮೆ ಬೆಲೆಗೆ ರಿಜಿಸ್ಟರ್ ಮಾಡಿರುವುದಕ್ಕೆ ಕಾರಣ ಯಾರು ? ಇದಕ್ಕೆ ಸಬ್-ರಿಜಿಸ್ಟ್ರಾರ್ ಆಫೀಸಿನವರೇ ಕಾರಣ. ರಿಜಿಸ್ಟರ್ ಮಾಡುವಾಗ ಯಾವರೀತಿ ಆಗುತ್ತದೆ ಎಂಬುದು ಮಾನ್ಯ ಸಚಿವರಿಗೂ ಗೊತ್ತಿದೆ. ೧೯೭೨ನೇ ಇಸವಿಯಿಂದ ಈಚೆಗೆ ರಿಜಿಸ್ಟರ್ ಆಗಿರತಕ್ಕ ಡಾಕ್ಯುಮೆಂಟ್‌ಗಳನ್ನು ನೋಡಿ ಸ್ಟ್ಯಾಂಪ್ ಡ್ಯೂಟಿ ಕಡಿಮೆ ಕೊಟ್ಟಿದ್ದರೆ ವ್ಯತ್ಯಾಸ ಏನಿದೆಅದನ್ನು

ವಸೂಲು ಮಾಡಬೇಕು ಎಂದು ಹೇಳುತ್ತಿದ್ದಾರೆ ೮ ವರ್ಷದ ಡಾಕ್ಯುಮೆಂಟುಗಳನ್ನು ನೋಡಬೇಕು. ಕಡಿಮೆಸ್ಟಾಂಪ್ ಡ್ಯೂಟಿಯಲ್ಲಿ ಪತ್ರ ರಿಜಿಸ್ಟರ್ ಆಗಿರಬೇಕಾದರೆ ಅದನ್ನು ಮಾಡಲು ಕಾನೂನಿಗೆ ವಿರುದ್ಧವಾಗಿ ಅಕ್ರಮವಾಗಿ ಹಣ ಕೊಟ್ಟು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. ಪತ್ರ ರಿಜಿಸ್ಟರ್ ಆದಾಗ ಇದ್ದಂಥ ಸಬ್ ರಿಜಿಸ್ಟ್ರಾರ್ ಅವರು ಈಗ ಬದಲಾಗಿರುತ್ತಾರೆ. ಈ ಪರಿಸ್ಥಿತಿಯಲ್ಲಿ ೮ ವರ್ಷ ಆದಮೇಲೆ ಹಳೇ ಬಾಕಿ ವಸೂಲು ಮಾಡುವುದಕ್ಕೋಸ್ಕರ ಕಾನೂನು ತರುತ್ತೇವೆ ಎಂದರೆ ಇದರಿಂದ ಎಷ್ಟೋ ಜನರಿಗೆ ತೊಂದರೆ ಯಾಗುತ್ತದೆ. ಈ ರೀತಿ ಕಡಿಮೆ ಸ್ಟಾಂಪ್ ಡ್ಯೂಟಿ ಕೊಟ್ಟಿರುವುದಕ್ಕೆ ಕಾರಣರು ತಮ್ಮ ಅಧಿಕಾರಿಗಳು. ತಮ್ಮ ಅಧಿಕಾರಿಗಳು ಮಾತಿರುವ ತಪ್ಪಿಗೆ ಕೊಂಡು ಕೊಂಡವನ ತಲೆ ಮೇಲೆ ಅಥವಾ ಮಾರಿದವನ ತಲೆ ಮೇಲೆ ಭಾರ ಹೊರಿಸಿದರೆ ಹಣ ವಸೂಲು ಮಾಡುವುದು ಬಹಳ ಕಷ್ಟವಾಗುತ್ತದೆ. ಒಂದು ವೇಳೆ ಹಿರಿಯರು ಯಾರೋ ಕೊಂಡುಕೊಂಡಿರುತ್ತಾರೆ. ಅವರು ತೀರಿಹೋಗಿದ್ದರೆ ಅವರ ಮಕ್ಕಳು ಡ್ಯೂಟಿ ಕೊಡಬೇಕು ಎಂದು ಹೇಳಿದರೆ ಇದರಿಂದ ಅವರು ತೊಂದರೆಗೆ ಸಿಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ೧೯೭೨ನೇ ಇಸವಿಯಿಂದ ವಸೂಲು ಮಾಡುತ್ತೇವೆ. ಎಂದು ಹೇಳುವುದನ್ನು ಬಿಟ್ಟು ಇಂದಿನ ಆ ರೀತಿ ಆಗದಂತೆ ಇದನ್ನು ಅನ್ವಯ ಮಾಡುವುದು ಒಳ್ಳೆಯದು. ಇಲ್ಲದೇ ಹೋದರೆ ವಿನಾಕಾರಣ ಗೊಂದಲಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ ಎಂಬ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿಯವರೆಗೆ ಸಬ್–ರಿಜಿಸ್ಟ್ರಾರ್‌ರವರಿಗೆ ಡಿಸ್ಕ್ರಿಷನರಿ ಪವರ್ ಇರುತ್ತದೋ ಅಲ್ಲಿಯವರೆಗೂ ಈ ಗೊಂದಲ ಇದ್ದೇ ಇರುತ್ತದೆ. ಎಷ್ಟು ಸಬ್-ರಿಜಿಸ್ಟ್ರಾರ್ ಆಫೀಸಿನಲ್ಲಿ ಎಷ್ಟು ಡಾಕ್ಯುಮೆಂಟುಗಳು ತಮ್ಮ ಗಮನಕ್ಕೆ ಬರುತ್ತವೆ ? ನಮ್ಮ ರಾಜ್ಯದಲ್ಲಿ ಎಲ್ಲಾ ಸಬ್–ರಿಜಿಸ್ಟ್ರಾರ್ ಆಫೀಸಿನಲ್ಲಿರತಕ್ಕ ಎಲ್ಲಾ ಡಾಕ್ಯುಮೆಂಟುಗಳನ್ನೂ ಪರಿಶೀಲನೆ ಮಾಡುವುದು ಸಾಧ್ಯವಾಗುವುದಿಲ್ಲ. ಜನತೆಗೂ ಹೊರೆಯಾಗ ಬಾರದು, ಸರ್ಕಾರಕ್ಕೂ ನಷ್ಟವಾಗಬಾರದು–ಈ ದೃಷ್ಟಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚನೆಯನ್ನು ಕೊಡಬಯಸುತ್ತೇನೆ. ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಡಾಕ್ಯುಮೆಂಟ್‌ಗಳನ್ನು ಪ್ರೆಸೆಂಟ್ ಮಾಡಿದರೆ ಆ ಬಗ್ಗೆ ಅವರೇ ಇಂಟರ್‌ಪ್ರಿಟ್ ಮಾಡುವ ಅವಕಾಶವನ್ನು ಕಿತ್ತುಹಾಕಿ. ಫೇಸ್ ವ್ಯಾಲ್ಯೂ ಮೇಲೆ ರಿಜಿಸ್ಟರ್ ಮಾಡದೆ ಕಡಿಮೆ ಬೆಲೆಗೆ ರಿಜಿಸ್ಟರ್ ಮಾಡಿದರೆ ಅವರಿಂದ ಹಣ ವಸೂಲು ಮಾಡುವುದು ಮಾತ್ರವಲ್ಲ, ವಿರೋಧವಾಗಿ ಮಾಡಿದ್ದಕ್ಕೆ ಅವರ ಮೇಲೆ ಮೊಕದ್ದಮೆಯನ್ನೂ ಹೂಡುವಂತೆ ಮಾಡಬೇಕು. ಸಬ್ ರಿಜಿಸ್ಟ್ರಾರ್ ಆಫೀಸಿಗೆ ಕೊಟ್ಟ ಡಾಕ್ಯುಮೆಂಟುಗಳ ಬಗ್ಗೆ ಯಾವ ಇಂಟರ್‌ಪ್ರಿಟೇಷನ್‌ಗೂ ಅಲ್ಲಿ ಅವಕಾಶ ಇಲ್ಲದಂತೆ ಮಾಡಬೇಕು. ಸರ್ಕಾರವೇ ನಿರ್ಬಂಧವಾಗಿ form of sale deed and form of gift deed ಕನ್ನಡದಲ್ಲಿ ಮಾಡಿಕೊಡಬೇಕು. ಯಾವರೀತಿ ಇದ್ದರೆ ಕಾನೂನುಬದ್ಧವಾಗಿರುತ್ತದೆ ಎಂಬುದನ್ನು ಖಚಿತವಾಗಿ ಪ್ರಕಟ ಮಾಡಿ ಕೊಟ್ಟರೆ ಸಾರ್ವಜನಿಕರಿಗೆ ಉಪಕಾರವಾಗುತ್ತದೆ. ಆಗ ಈ ರೀತಿಯ ಗೊಂದಲ ಕಡಿಮೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಆದ್ದರಿಂದ ಇದನ್ನು ತಾವು ಯೋಚನೆ ಮಾಡಬೇಕು. ೧೯೭೨ನೇ ಇಸವಿಯಿಂದ ವಸೂಲು ಮಾಡಬೇಕು ಎಂದು ಮಸೂದೆಯಲ್ಲಿ ಹಾಕಿರುವುದು ಸಾಧುವಾದುದಲ್ಲ. ಅದನ್ನು ತೆಗೆದು ಪ್ರಾಸ್ಪೆಕ್ಟೀವಾಗಿ ಮಾಡಿ, ನಾನು ಹೇಳಿದ ಕೆಲವು ಸೂಚನೆಗಳನ್ನು ಅದರಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿ, ನನ್ನ ಮಾತು ಗಳನ್ನು ಮುಗಿಸುತ್ತೇನೆ.

೪–೩೦ ಪಿ.ಎಂ.

ಶ್ರೀ ವಿ.ಎಲ್. ಶಿವಪ್ಪ(ತಿಪಟೂರು) ಸನ್ಮಾನ್ಯ ಅಧ್ಯಕ್ಷರೆ ನಮ್ಮ ಕಂದಾಯ ಸಚಿವರು ತಂದಿರತಕ್ಕ ತಿದ್ದುಪಡಿಯನ್ನು ನಾನು ಮನಸ್ಸು ತುಂಬಿ ಅನುಮೋದಿಸಿದರೂ ಕೂಡ ಈಗ ತಂದಿರತಕ್ಕ ತಿದ್ದುಪಡಿ ಹಿಂದಿನ ಬಾಕಿ ವಸೂಲು ಮಾಡುವುದಾಗಿದೆ. ಆದರ ಜೊತೆಗೆ ಯಾವ ರೈತರು ಈ ಕಂದಾಯವನ್ನು ಕೊಡುತ್ತಾರೋ ಅದೇ ರೈತರು ಈ ಹೊರೆಯನ್ನು ಹೊರಬೇಕಾಗಿದೆ. ಆದುದರಿಂದ ನಾವು ಇದನ್ನು ತೀರ್ಮಾನ ಮಾಡುವುದು ಸರಿಯೇ ಎಂದು ಯೋಚಿಸಬೇಕಾಗುತ್ತದೆ. ಹಿಂದೆ ಅಲ್ಲಿರತಕ್ಕ ಸಬ್ ರಿಜಿಸ್ಟ್ರಾರ್ ಇಷ್ಟು ಸ್ಟ್ಯಾಂಪ್ ಡ್ಯೂಟಿ ಆಗುತ್ತದೆ. ಎಂದು ಸರಿಯಾಗಿ ಪರಿಶೀಲಿಸಿ ತೆಗೆದುಕೊಂಡಿದ್ದರೆ ಸರಿ ಹೋಗುತ್ತಿತ್ತು, ಅದು ಏನಾಗಿದೆ ಅಂದರೆ ಅಲ್ಲಿಗೆ ಬರತಕ್ಕವರನ್ನು ೧೦೦ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಇದ್ದರೆ, ೧೫೦ ರೂಪಾಯಿ ಆಗುತ್ತದೆಂದು ಹೇಳಿ ಹೆದರಿಸಿ ಹಣ ತೆಗೆದುಕೊಂಡಿರುತ್ತಾರೆ. ಅವತ್ತು ಅವನಿಗೆ ಕೊಟ್ಟು ಇವೊತ್ತು ನೀವು ಲೆವಿ ಮಾಡಿ ಪುನಃ ಅವನಿಂದಲೇ ವಸೂಲು ಮಾಡಬೇಕು ಅಂದರೆ ಹೇಗೆ ? ಏಕೆಂದರೆ ಸುಮಾರು ಮೂರು ನಾಲ್ಕು ಜನರ ಕೈ ಬದಲಾವಣೆಯಾಗಿರುತ್ತದೆ, ಇದನ್ನೆಲ್ಲಾ

ರೈತರ ಮೇಲೆ ಪ್ರಯೋಗ ಮಾಡುವುದು ಸರಿಯೇ ? ತಾವು ಇದನ್ನೆಲ್ಲಾ ಮಾಡಲಿಕ್ಕೆ ಹೋದರೆ ಅವನು ಮನೆಯ ಹತ್ತಿರ ಕೆಲಸ ಮಾಡುವ ಹಾಗೆ ಇರುವುದಿಲ್ಲ. ಅವನು ಕಂಟ್ರೋಲರ್ ಹತ್ತಿರ ಹೋಗಬೇಕು, ಅಲ್ಲಿ ಹೋಗ ಬೇಕು, ಇಲ್ಲಿ ಹೋಗಬೇಕು ಇದೇ ಅವನಿಗೆ ಆಗುತ್ತದೆ. ಈಗ ಮಾನ್ಯ ಗಂಗಾಧರನ್ ಅವರು ಹೇಳಿದ ಹಾಗೆ ಮುಂದೆ ಏನು ಕಾನೂನು ಬೇಕಾದರೂ ಮಾಡಿ ಸೇಲ್ ಡೀಡ್ ಹೀಗೆ ಇರಬೇಕು ಆಧಾರ ಪತ್ರ ಹೀಗೆ ಇರಬೇಕು ಅಂತ ಬೇಕಾದರೂ ಮಾಡಿ ಹಿಂದೆ ಶ್ಯಾನುಭೋಗರು ಏನು ಬರೆದಿರುತ್ತಾರೆ ಅದರಂತೆ ಆಗಿರುತ್ತದೆ. ರೈತನಿಗೆ ಏನೂ ಗೊತ್ತಾಗುವುದಿಲ್ಲ. ಇದು ತಮಗೂ ಕೂಡ ಗೊತ್ತಿರ ತಕ್ಕ ವಿಚಾರವೆ. ತಾವು ಮುಂದೆ ಏನು ಬೇಕಾದರೂ ಮಾಡಿ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಬೇಡ. ಈಗ ಪ್ರಾಣಿಗಳ ಮೇಲೆಪ್ರಯೋಗ ಮಾಡಿದ ಹಾಗೆ ರೈತ ವರ್ಗಕ್ಕೆ ಸೇರಿದವರ ಮೇಲೆ ಪ್ರಯೋಗ ಬೇಡ ಇದನ್ನು ೧-೪-೧೯೮೦ ರಿಂದ ಜಾರಿಗೆ ತನ್ನಿ ಬೇಡ ಎಂದು ಹೇಳುವುದಿಲ್ಲ. ಇಂತಿಂಥ ಪತ್ರಗಳು ಹೀಗೆ ಇರಬೇಕು ಅಂತ ಹೇಳಿ ಬೇಡ ಅಂತ ಹೇಳುವುದಿಲ್ಲ. ಹಿಂದೆ ಕ್ರಯ ಪತ್ರಕ್ಕೆ ಭೋಗ್ಯ ಮಾಡುವುದು, ಭೋಗ್ಯ ಪತ್ರಕ್ಕೆ ಕ್ರಯ ಪತ್ರ ಮಾಡುವುದು ಈ ರೀತಿ ಎಲ್ಲಾ ನಡೆದಿದೆ. ಈಗ ಮತ್ತೆ ಅವರಿಗೆಲ್ಲ ಹಿಂಸೆ ಆಗುವುದು, ಬೇಡ ಈಗ ಇದು ೧-೪-೧೯೮೦ ರಿಂದ ಜಾರಿಗೆ ಬರುವಂತೆ ಮಾಡಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್. (ಜಯನಗರ) ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಉದಾಹರಣೆಗಳನ್ನು ಮಾನ್ಯ ಮಂತ್ರಿಗಳಲ್ಲಿ ಹೇಳಬೇಕು ಅಂದರೆ ಲೀಸ್ ಕಮ್ ಸೇಲ್ ವ್ಯವಹಾರಗಳು ಹೌಸಿಂಗ್ ಬೋರ್ಡ್, ಟ್ರಸ್ಟ್‌ಬೋರ್ಡ್‌ಗಳಲ್ಲಿ ಆಗುತ್ತದೆ. ಲೀಸ್ ಕಮ್ ಸೇಲ್ ಆದಾಗ ಒಂದು ಹತ್ತು ವರ್ಷದ ಅವಧಿ ಇರುತ್ತದೆ, ಅದು ಆದಮೇಲೆ ಪೂರ್ಣಬೆಲೆಗೆ ರಿಜಿಸ್ಟ್ರೇಷನ್ ಮಾಡಬೇಕೆಂದು ಹೇಳುತ್ತಾರೆ. ಲೀಸ್ ಕಮ್ ಸೇಲ್ ಆ್ಯಕ್ಟ್ ಪ್ರಕಾರ ಆ ಅವಧಿ ಪೂರ್ಣ ಆದಾಗ ಖರೀದಿ ಪತ್ರ ರಿಜಿಸ್ಟರ್ ಮಾಡಿಕೊಳ್ಳಬೇಕಾಗಿ ಬರುತ್ತದೆ. ಆದಗೆ ಈಗ ಮೊದಲೇ ಪೂರ್ಣ ಬೆಲೆಗೆ ಸ್ಟಾಂಪ್ ಕೊಟ್ಟುಮಾಡಿಕೊಂಡು ಮತ್ತೆ ಇನ್ನೊಂದು ಸಾರಿ ೧೦ ವರ್ಷ ಆದಮೇಲೆ ಅದನ್ನು ರಿಜಿಸ್ಟರ್ ಮಾಡಿಸಬೇಕಾದ ಕೆಲವು ಪ್ರಸಂಗಗಳು ಬೆಂಗಳೂರು ನಗರದಲ್ಲಿ ಹೌಸಿಂಗ್ ಬೋರ್ಡ್‌ನಲ್ಲಿ ಆಗಬೇಕಾಗಿರುವ ಕೆಲವು ಪ್ರಸಂಗಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಅದೇ ರೀತಿ ಟ್ರಸ್ಟ್ ಬೋರ್ಡ್‌ನಲ್ಲಿ ೧೦ ವರ್ಷಗಳ ಹಿಂದೆ ಕಾಲಿ ನೀವೇಶನ ಕೊಟ್ಟಿರುತ್ತಾರೆ. ೨ವರ್ಷಗಳಲ್ಲಿ ಮನೆ ಕಟ್ಟಬೇಕು ೧೦ವರ್ಷಗಳಲ್ಲಿ ಒಂದು ಕ್ರಯ ಪತ್ರ ಮಾಡಿಕೊಳ್ಳಬೇಕು ಎಂದು ಹೇಳಿರುತ್ತಾರೆ. ಅವರು ಈ ಕಾಯಿದೆಯನ್ನು ಜಾರಿಗೆ ತರೆವೇ ಇರುವುದರಿಂದ ೧೦ ವರ್ಷ ಆದ ಮೇಲೆ ಕ್ರಯಪತ್ರ ಮಾಡಿಕೊಂಡಿಲ್ಲ. ಕ್ರಯಪತ್ರ ಇಲ್ಲದೆ ಪೊಸಿಷನ್ ಸರ್ಟಿಫಿಕೇಟ್ ಒಂದರಿಂದಲೇ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡು, ಮನೆ ಕಟ್ಟಿಕೊಂಡು ಆಸ್ತಿ ಅನುಭವಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇವೊತ್ತು ನಿವೇಶನದ ಒಡೆಯರು ಏನು ಹೇಳುತ್ತಿದ್ದಾರೆ, ಅಂದರೆ, ನಮಗೆ ಕ್ರಯ ಪತ್ರದ ಅವಶ್ಯಕತೆ ಏನಿದೆ. ನಮಗೆ ಸೈಟು ಕೊಟ್ಟರು ಪೊಸಿಷನ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅದರ ಮೇಲೆ ಮನೆ ಕಟ್ಟಿಕೊಂಡಿದ್ದೇವೆ. ಬ್ಯಾಂಕುಗಳ ಮುಖಾಂತರ ಕ್ರಯವಿಲ್ಲದೆ ಸಾಲ ತೆಗೆದುಕೊಳ್ಳಲಿಕ್ಕೆ ಅವಕಾಶ ಇದೆ. ಈಗ ಸ್ಟಾಂಪ್ ಕೊಟ್ಟು ನಮ್ಮ ಕ್ರಯಪತ್ರ ಮಾಡಿಕೊಳ್ಳಲೇ ಬೇಕು ಅಂತ ಏತಕ್ಕೆ ಒತ್ತಾಯ ಮಾಡುತ್ತಾರೆ ಅಂತ ಕೇಳುತ್ತಿದ್ದಾರೆ. ಇದರ ಬಗ್ಗೆ ಪ್ರತಿಯೊಬ್ಬರಿಗೂ ಕೂಡ ನೀವು ಕ್ರಯ ಪತ್ರ ಮಾಡಿಕೊಳ್ಳಲೇ ಬೇಕು ಅಂತ ಬಿ.ಡಿ.ಎ,ಯಿಂದ ನೋಟಿಸ್ ಕಳುಹಿಸಿಕೊಡುತ್ತಿದ್ದಾರೆ. ಇದರಲ್ಲಿ ಸುಮಾರು ೩೦ ಸಾವಿರ ಸೈಟುದಾರರು ಬರುತ್ತಾರೆ. ಆದುದರಿಂದ ಇದರ ಬಗ್ಗೆ ಯಾವರೀತಿ ಮಾಡುತ್ತೀರಾ ಅನ್ನುವುದನ್ನು ತಿಳಿಸಬೇಕಾಗುತ್ತದೆ. ಇನ್ನು ಹಳೆಯದೆಲ್ಲಾ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಸಾವಿರಾರು ರಿಜಿಸ್ಟ್ರೇಷನ್‌ಗಳು ಬಂದಾಗ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಒಂದನೆದಾಗಿ ಲೀಸ್ ಡೀಡ್‌ಗೆ ಸ್ಟಾಂಪ್ ಡ್ಯೂಟಿ ಕೊಟ್ಟು ಪೂರ್ಣ ಕ್ರಯದ ಬೆಲೆಗೆ ರಿಜಿಸ್ಟರ್ ಫುಲ್ ಅಮೌಂಟ್‌ಗೆ ಮಾಡಿಸಬೇಕು ಅಂದಾಗ ಮತ್ತೊಂದು ಸಾರಿ ಅವಧಿಯಾದ ಮೇಲೆ ಅದನ್ನು ವಸೂಲು ಮಾಡಬೇಕಾಗಿ ಬರುತ್ತದೆ. ಎರಡನೆಯದಾಗಿ ಟ್ರಸ್ಟ್ ಬೋರ್ಡಿನಿಂದ ಹಿಂದೆ ಸೈಟು ಕೊಂಡಿದ್ದವರು ಈಗ ತಮಗೆ ಕ್ರಯಪತ್ರ ಬೇಡ ಅಂತ ಹೇಳಿದರೆ ಅವರನ್ನು ಮಾಡಿಸಿಕೊಳ್ಳಲೇ ಬೇಕು ಅಂತ ಒತ್ತಾಯ ಹಾಕುವುದು ಸರಿಯೇ ಅದನ್ನು ಮಾನ್ಯ ಮಂತ್ರಿಗಳು ವಿಷದವಾಗಿ ತಿಳಿಸಬೇಕಾಗುತ್ತದೆ. ಹಿಂದೆ ಸ್ಟಾಂಪ್ ಡ್ಯೂಟಿ ಯಾವುದೋ ಕಾರಣದಿಂದ ಕಡಿಮೆ ತೆಗೆದುಕೊಂಡಿದ್ದಾರೆ,ಅಂತಹ ಇವೊತ್ತು ಭಾರಿಲೆಕ್ಕ ಹಾಕಿದರೆ ಸರಿಯೇ. ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಹೇಗೆ ಹೇಳುತ್ತಿದ್ದರು ಹಾಗೆ ಮಾಡುತ್ತಿದ್ದರು. ಯಾವುದೋ ಕಾರಣದಿಂದ ಅದನ್ನು ಮತ್ತೆ ಓಪನ್ ಮಾಡಲಿಕ್ಕೆ ಹೋದರೆ ಒಂದೊಂದು ಕಡೆ ಒಂದೊಂದು ತರಹ ತೊಂದರೆ ಬಂದು ಕಷ್ಟವಾಗುತ್ತದೆ. ಸರ್ಕಾರದ

ವತಿಯಿಂದ ಕಾನೂನು ಅಡಚಣೆ ಬಂದಿದ್ದರೆ ಅದನು ಸರಿಪಡಿಸುವುದಕ್ಕೆ ಸರ್ಕಾರಿ ಲೀಸ್ ಸೇಲ್ ವಿಚಾರದಲ್ಲಿ ಟ್ರಸ್ಟ್‌ಬೋರ್ಡ್ ವಿಚಾರದಲ್ಲಿ ಅದನ್ನು ಮಾಡಲಿಕ್ಕೆ ಅನ್ವಯಿಸಬೇಕೇ ವಿನಹ ಸಾಮಾನ್ಯ ವಿಲೇವಾರಿಯಲ್ಲಿ ಹಿಂದಿನಿಂದ ಹಾಕುವುದು ಸರಿಯಲ್ಲ. ಇನ್ನು ಮುಂದೆ ಈ ರೀತಿ ಹಾಕಬೇಕು ಅಂತ ವಿಧಿಸುವುದು ಸೂಕ್ತ ಅಂತ ಹೇಳಿ ಆಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

B. V. PATTAR.—Sir after hearing the arguments of members of either sides, I find that there are two kinds of cases viz., wherever the document is insufficiently stamped, there is either corruption or it may be an act of innocence. In case where corruption has taken place, a person in whose favour the document, is made is guilty of paying corruption to the officer. Therefore, he is liable under law for punishment for taking additional charges which is not contemplated under this act. No sympathy need be shown in such cases, secondly whenever innocently or by mis-interpretation of law, if the stamp duty is insufficiently paid, then in such cases the Goverument is entitled to recover that amount. So, in either case we must see that Govrnment recovers proper duty payable on a particular document. With these few words I support this amendment and request the House to pass it accordingly.

ಶ್ರೀ ಹೆಚ್. ಗಂಗಾಧರನ್.—ಕರಪ್‌ಷನ್ ಆದ್ದರಿಂದ ಲೇಯಬಲ್ ಫಾರ್ ಪನಿಷ್‌ಮೆಂಟ್ ಆಗುತ್ತದೆ. ಅಂಥ ಸಬ್ ರಿಜಿಸ್ಟ್ರಾರ್ ಇಟ್ಟುಕೊಂಡಿರುವುದು ಸರ್ಕಾರದ ತಪ್ಪು ಆಗುತ್ತದೆ. Can you punish the Government ?

ಶ್ರೀ ಎಸ್. ಬಂಗಾರಪ್ಪ (ಮಾನ್ಯ ಕಂದಾಯ ಹಾಗೂ ವ್ಯವಸಾಯ ಖಾತೆ ಸಚಿವರು):—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ್‌ರವರು ಮಾತನಾಡುತ್ತಾ ೧೯೨೦ ರಿಂದ ಏತಕ್ಕೆ ಇದರ ಲೆಕ್ಕಾಚಾರ ಹಾಕುವುದಕ್ಕೆ ಹೋಗಿದ್ದೀರಿ, ಪ್ರಾಸ್ಪೆಕ್ಟೀವ್ ಆಗಿ ತೆಗೆದುಕೊಳ್ಳಿ, ರೆಟ್ರಾಸ್ಪೆಕ್ಟೀವ್ ಆಗಿ ಎಫೆಕ್ಟ್‌ಗೆ ಕೊಡುವುದಕ್ಕೆ ಹೋಗಬೇಡಿ ಎಂದು ಹೇಳಿದರು. ಅದೇ ರೀತಿಯ ಅಭಿಪ್ರಾಯವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ವಿ.ಎಲ್. ಶಿವಪ್ಪನವರೂ ವ್ಯಕ್ತಮಾಡಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ತಂದಿರತಕ್ಕ ತಿದ್ದುಪಡಿ ಉದ್ದೇಶವೇ ರೆಟ್ರಾಸ್ಪೆಕ್ಟೀವ್ ಆಗಿ ಹಾಕಬೇಕೆಂಬುದು. ನಾವು ಪ್ರಾಸ್ಪೆಕ್ಟೀವ್ ಆಗಿ ಹಾಕುವುದಾದರೆ ಇನ್ನು ಈ ಪುಸ್ತಕ, ಈ ಕಾನೂನು ಏತಕ್ಕೆ ಬೇಕು? ಹಿಂದೆ ಯಾವುದೋ ಕಾಲದಲ್ಲಿ ಹಿರಿಯರು ಆಸ್ತಿಯನ್ನು ತಮ್ಮ ಮಕ್ಕಳಿಗೆ ವಿಭಾಗ ಮಾಡಿ ಪತ್ರವನ್ನು ರಿಜಿಸ್ಟರ್ ಮಾಡಿಸಿರುತ್ತಾರೆ. ಆದರೆ ಈಗ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಅಂತ ನೀವು ಜಾರಿಗೆ ತರುವುದಾದರೆ ಪಾಪ ಈ ಮಕ್ಕಳಿಗೆ ತೊಂದರೆ ಕೊಟ್ಟಂತಾಗುತ್ತದೆಂದು ಸದಸ್ಯರು ಅಭಿಪ್ರಾಯ ವ್ಯಕ್ತ ಮಾಡಿದರು. ಆದರೆ ಆ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯೂ ಆಗುವುದಿಲ್ಲ ಆ ಮಕ್ಕಳಿಗೆ ಆಸ್ತಿ ಹೋಗಿರುತ್ತದೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ಖುಷ್ಕಿ ಭೂಮಿಯನ್ನೂ ಒಳಗೊಂಡಂತೆ ಯಾವುದೇ ಒಂದು ಜಮೀನನ್ನು ತೆಗೆದುಕೊಂಡರೂ ಆ ಆಸ್ತಿಯ ಬೆಲೆ ದಿನೇ ದಿನೇ ಜಾಸ್ತಿ ಯಾಗುತ್ತಲೇ ಹೋಗುತ್ತಿರುತ್ತದೆ. ಕಡಿಮೆಯಂತೂ ಎಂದಿಗೂ ಆಗುವುದಿಲ್ಲ. ಒಂದು ಆಸ್ತಿಯ ಬೆಲೆ ಕಡಿಮೆ ಆಯಿತು ಎಂದರೆ ಅಲ್ಲಿ ಏನೋ ಹೆಚ್ಚೂ ಕಡಿಮೆ ಆಗಿದೆ ಎಂದು ಹೇಳಬಹುದು. ಕೆಲವರು ಹೇಳಿದರು ಜಮೀನನ್ನು ರಿಜಿಸ್ಟರ್ ಮಾಡಿಸಬೇಕಾದರೆ ಒಂದು ನಿಗದಿಯಾದ ಫಾರಂನ್ನು ಇಟ್ಟು ಅದರಲ್ಲಿ ಸರಿಯಾದ ಪದಗಳನ್ನು ನಮೂದಿಸಬೇಕು ಎಂದು. ಆದರೆ ಇಲ್ಲಿ ಏನಾಗುತ್ತದೆ ಎಂದರೆ ಪದಗಳು ಹೀಗೇ ಇರಬೇಕೆಂದು ನಾವು ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ. ಒಬ್ಬೊಬ್ಬರೂ ಒಂದೊಂದು ರೀತಿಯ ಅರ್ಥ ಬರುವಂತೆ ಅವರವರದೇ ಆದ ಅಭಿಪ್ರಾಯವುಳ್ಳ ಪದಗಳನ್ನು ಹಾಕಿ ಪತ್ರ ಬರೆಸುತ್ತಾರೆ. ಪಟ್ಟಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ, ಎಲ್ಲಿಯೇ ಹೋಗಿ ನೋಡಿದರೂ ಕೂಡ ಜನರು ತಮ್ಮ ತಮ್ಮ

ಮನಸ್ಸಿಗೆ ಬಂದಂತೆ ಪದಗಳನ್ನು ಉಪಯೋಗಿಸಿ ಪತ್ರ ಬರೆಸುತ್ತಿರುವುದರಿಂದ ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದ ಲಕ್ಷಾಂತರ ರೂಪಾಯಿ ಇವತ್ತು ಸೋರಿ ಹೋಗುತ್ತಿದೆ ಈ ಸೋರುವಿಕೆಯನ್ನು ತಡೆಗಟ್ಟುವುದಕ್ಕೋಸ್ಕರ ಮತ್ತು ಇನ್ನು ಮುಂದೆ ಈ ರೀತಿ ಕಡಿಮೆ ದುಡ್ಡಿಗೆ ಪತ್ರ ಬರೆಸಿ ರಿಜಿಸ್ಟರ್ ಮಾಡಿಸಿದರೂ ಕೂಡ ಮತ್ತೆ ನಮ್ಮಿಂದ ಬಾಕಿ ಹಣವನ್ನು ವಸೂಲ್ಮಾಡುತ್ತಾರೆಂಬ ಹೆದರಿಕೆ ಜನರಲ್ಲಿ ಬರಲಿ ಎಂಬ ಉದ್ದೇಶದಿಂದ ಈ ದಿವಸ ಈ ಒಂದು ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಯಾವುದೇ ಒಂದು ಡಾಕ್ಯುಮೆಂಟ್‌ನ್ನೂ ರಿಜಿಸ್ಟ್ರೇಷನ್ ಮಾಡಿಸಬೇಕಾದರೂ ಲೆಕ್ಕಾಚಾರವಾಗಿ ನಿಗದಿಯಾದ ಇಂತಿಷ್ಟೇ ದುಡ್ಡಿನ ಸ್ಟ್ಯಾಂಪ್ ಪೇಪರ್ ತೆಗೆದು ಕೊಳ್ಳಬೇಕೆಂದು ಇದ್ದು ಅದನ್ನು ಒಬ್ಬ ವಕೀಲನ ಮೂಲಕ ತೆಗೆದುಕೊಂಡು ಹೋದರೆ ಈ ರೀತಿ ಅನ್ಯಾಯವಾಗುವುದಿಲ್ಲ. ಆದರೆ ವಕೀಲರ ಮೂಲಕ ಹೋಗದೆ ಯಾರೋ ಮರದ ಕೆಳಗೆ ಕೂತಿದ್ದವರ ಕೈಯಲ್ಲಿ ಪತ್ರ ಬರೆಸಿ ರಿಜಿಸ್ಟ್ರೇಷನ್‌ಗೆ ತೆಗೆದುಕೊಂಡು ಹೋಗುತ್ತಾರೆ. ಆಗ ಸಬ್ ರಿಜಿಸ್ಟ್ರಾರ್ ಮತ್ತು ಪಾರ್ಟಿ ಇಬ್ಬರೂ ಪರೀಕ್ಷಾಗಿ ಲಂಚ ತೆಗೆದುಕೊಂಡು ಕಾನೂನು ಪ್ರಕಾರ ಸರ್ಕಾರಕ್ಕೆ ಬರಬೇಕಾದ ತೆರಿಗೆ ಬಾರದಂತೆ ಮಾಡುತ್ತಾರೆ. ಈ ಕಾಗದ ರಿಜಿಸ್ಟರ್ ಮಾಡಿಸಬೇಕಾದರೆ ಪಾರ್ಟಿ ಸಬ್ ರಿಜಿಸ್ಟ್ರಾರ್‌ಗೆ ಮತ್ತು ಪತ್ರ ಬರೆದವನಿಗೆ ಇಬ್ಬರಿಗೂ ಪಾರ್ಟಿ ಮೊದಲು ದುಡ್ಡು ಕೊಟ್ಟಿರುತ್ತಾನೆ. ಈಗ ನೀವು ತಂದಿರತಕ್ಕ ತಿದ್ದುಪಡಿಯಿಂದ ಏನಾಗುತ್ತದೆ ಎಂದರೆ, ಪಾರ್ಟಿ ಮೊದಲೇ ಈ ಇಬ್ಬರಿಗೂ ದುಡ್ಡು ಕೊಟ್ಟು ಕಳೆದುಕೊಂಡಿರುತ್ತಾನೆ, ಅವನಿಗೆ ಮತ್ತೆ ಬರೆ ಹಾಕುವುದಕ್ಕೆ ಹೊರಟಂತಾಗಿದೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಯಾವ ಅಧಿಕಾರಿ ಲಂಚ ತೆಗೆದುಕೊಂಡು ಕಡಿಮೆ ದುಡ್ಡಿನ ಪತ್ರವನ್ನು ರಿಜಿಸ್ಟರ್ ಮಾಡಿ ಕೊಟ್ಟಿರುತ್ತಾನೆ ಅವನನ್ನೂ ಕೂಡ ಈ ಕಕ್ಷೆಯಲ್ಲಿ ತೆಗೆದುಕೊಂಡು ಬಂದು ಶಿಕ್ಷೆ ವಿಧಿಸುವಂತಿರಬೇಕು. ಇವತ್ತು ಏನಾಗಿದೆ ಎಂದರೆ ಸಬ್ ರಿಜಿಸ್ಟ್ರಾರ್ ಕೇಳಿದಷ್ಟು ದುಡ್ಡನ್ನು ಪಾರ್ಟಿ ಕೊಟ್ಟರೆ ಅವನು ಯಾವ ಕಾನೂನನ್ನೂ ಕೇಳುವುದಕ್ಕೆ ಹೋಗದೆ ಸುಮ್ಮನೆ ಪತ್ರ ರಿಜಿಸ್ಟರ್ ಮಾಡಿಕೊಡುತ್ತಾನೆ. ಈಗಿನ ನಿಮ್ಮ ಕಾನೂನು ಪ್ರಕಾರ ತೆಗೆದುಕೊಂಡರೆ, ೧೯೭೨ ರಿಂದ ಯಾರ್ಯಾರು ಜಮೀನು ರಿಜಿಸ್ಟರ್ ಮಾಡಿಸಿಕೊಂಡಿರುತ್ತಾರೆ ಅವರಿಗೆಲ್ಲಾ ನೋಟೀಸ್ ಕೊಟ್ಟು ನೀವು ಇನ್ನೂ ಸ್ಟ್ಯಾಂಪ್ ಡ್ಯೂಟಿಯನ್ನು ಸರ್ಕಾರಕ್ಕೆ ಕೊಡಬೇಕೆಂದು ತಿಳಿಸಿ ಅವರಿಂದ ಪುನಃ ಸಬ್ ರಿಜಿಸ್ಟ್ರಾರ್ ಆಫೀಸ್‌ನವರು ಲಂಚ ತೆಗೆದು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮೊದಲೇ ಆಗಿರುವ ಹುಣ್ಣಿನ ಮೇಲೆ ಬರೆ ಹಾಕಿದಂತಾಗುತ್ತದೆ. ಏಕೆಂದರೆ ಪಾರ್ಟಿ ಹಿಂದೆ ಪತ್ರ ರಿಜಿಸ್ಟರ್ ಮಾಡಿಸುವ ಸಂದರ್ಭದಲ್ಲೇ ಬರೆದವನಿಗೆ ಮತ್ತು ಸಬ್ ರಿಜಿಸ್ಟ್ರಾರ್‌ರವರಿಗೆ ಇಬ್ಬರಿಗೂ ಹಣ ಕೊಟ್ಟಿರುತ್ತಾನೆ. ಇಷ್ಟೇ ಅಲ್ಲದೆ ಈ ಸಬ್ ರಿಜಿಸ್ಟ್ರಾರ್ ಆಫೀಸ್‌ಗಳು ಲಂಚದ ಕೂಪಗಳಾಗಿವೆ ಎಂದು ಎಲ್ಲ ಕಡೆಯಲ್ಲೂ ಕೇಳಿಬರುತ್ತಿದೆ.

ಮಾನ್ಯ ಅಧ್ಯಕ್ಷರೆ, ತಮಗೆ ಒಂದು ಉದಾಹರಣೆ ಹೇಳುವುದಾದರೆ, ನಿವೃತ್ತ ಹೈಕೋರ್ಟ್ ಜಡ್ಜ್ ಒಬ್ಬರು ತಮ್ಮ ಆಸ್ತಿಯನ್ನೆಲ್ಲಾ ತಮ್ಮ ಸಹೋದರರಿಗೆ ಹಂಚಬೇಕೆಂದು ಪತ್ರವನ್ನು ರಿಜಿಸ್ಟರ್ ಮಾಡಿಸಲು ಸಿದ್ಧಮಾಡಿಟ್ಟುಕೊಂಡಿದ್ದರು. ಆದರೆ ಸಬ್ ರಿಜಿಸ್ಟ್ರಾರ್‌ರವರಿಗೆ ಇವರು ಹಣ ಕೊಡದೇ ಹೋದುದರಿಂದ ಆ ಪತ್ರವನ್ನೇ ಮುಟ್ಟಲಿಲ್ಲ. ಆ ಜಡ್ಜ್ ಯಾರು ಎಂಬುದು ಮಾನ್ಯ ಸಚಿವರಿಗೂ ಗೊತ್ತಿದೆ. ಇವತ್ತು ತಾವು ಏನು ಕಾನೂನು ತಂದಿದ್ದೀರಿ, ತಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದೀರಿ ಎಂದರೆ ''ಲೆವಿ ಮಾಡದಿರುವವರಿಗೆ, ಷಾರ್ಟ್ ಲೆವಿ ಮಾಡಿರುವವರಿಗೆ'' ಅನ್ವಯಿಸಬೇಕೆಂದು ಹೇಳಿದ್ದೀರಿ. ಇದಕ್ಕೆ ಯಾರು ಕಾರಣರು. ಏತಕ್ಕೆ ಈ ರೀತಿ ಆಯಿತು? ತಾವು ಕೇವಲ ಪತ್ರ ರಿಜಿಸ್ಟರ್ ಮಾಡಿಸಿಕೊಳ್ಳುವವರನ್ನು ಮಾತ್ರ ಹಿಡಿದುಕೊಳ್ಳುವುದಕ್ಕೆ ಹೊರಟಿದ್ದೀರಿ. ಇದು ಸರಿಯಲ್ಲ. ಇದಕ್ಕೆ ಕಾರಣರಾದ ಅಧಿಕಾರಿಗಳನ್ನೂ ಹಿಡಿದುಕೊಂಡು ಅವರಿಗೆ ಶಿಕ್ಷೆ ವಿಧಿಸಲು ಕಾನೂನು ತಿದ್ದುಪಡಿ ಮಾಡಬೇಕು. ಯಾರೋ ಬಡಪಾಯಿ ಸಿಕ್ಕಿದ್ದಾನೆಂದು ಅವನನ್ನು ಸದೆಬಡಿಯುವುದಕ್ಕೆ ಹೊರಟಿರುವುದು ಸಾದುವಾದುದಲ್ಲ. ಇದು ೨೫ನೇ ಚಾರ್ಲ್ಸ್‌ನ ಆಲಿವರ್ ಕ್ರೋಂ ಸತ್ತ ಮೇಲೆ, ಅವನ ಅಸ್ತಿಪಂಜರ ತೆಗೆದುಕೊಂಡಾತಾಯಿತು ನಾನು ಆಗಲೆ ಹೇಳಿದಂತೆ ಕಾನೂನು ದುರುಪಯೋಗ ಮಾಡಿಕೊಂಡ ಅಧಿಕಾರಿಗಳಿಗೂ ಶಿಕ್ಷೆ ವಿಧಿಸುವುದಕ್ಕೆ ಅವಕಾಶವಿರುವಂತೆ ಕಾನೂನು ತಿದ್ದುಪಡಿ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಬಡ ಜನತೆ ಈ ಕಾನೂನಿನಿಂದ ನರಕ ಯಾತನೆಯನ್ನು ಅನುಭವಿಸಬೇಕಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ತಾವು ಏನು ವಿಷಯವನ್ನು ಈಗ ಪ್ರಸ್ತಾಪ ಮಾಡಿದಿರಿ, ಇದೇ ಅಭಿಪ್ರಾಯ ಎಲ್ಲ ಸದಸ್ಯರ ಮನಸ್ಸಿನಲ್ಲೂ ಇದೆ. ಪತ್ರ ಬರೆಸಿಕೊಂಡು ಬರತಕ್ಕ ಜನರ ಮೇಲೆ ಎಷ್ಟು

ಜವಾಬ್ದಾರಿ ಇರುತ್ತದೋ ಅದಕ್ಕಿಂತಲೂ ಹೆಚ್ಚಿನ ಜವಾಬ್ದಾರಿ ಈ ಸಬ್ ರಿಜಿಸ್ಟ್ರಾರ್ ಮೇಲೂ ಇರುತ್ತದೆ. ಇದನ್ನು ಮನಗಂಡೇ ನಾವು ಈಗ ಈ ಒಂದು ತಿದ್ದುಪಡಿಯನ್ನು ಸಭೆಯ ಮುಂದೆ ತಂದಿರುವುದು.

ಇನ್ನು ತಾವು ಹೇಳಿದಂತೆ ಸಬ್ ರಿಜಿಸ್ಟ್ರಾರ್‌ರವರ ಕಛೇರಿಗಳು ಲಂಚದ ಕೂಪಗಳಾಗಿವೆ ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಈಗಿರತಕ್ಕಂಥ ಕಾನೂನಿನಲ್ಲಿ ಏನು ಇದೆ ಎಂದರೆ ಎಲ್ಲಿಯಾದರೂ ಯಾರಾದರೂ ಒಬ್ಬ ಸಬ್ ರಿಜಿಸ್ಟ್ರಾರ್ ಏನಾದರೂ ಸರಿಯಾಗಿ ನಡೆದುಕೊಳ್ಳದೆ ತಪ್ಪು ಮಾಡುವುದಾಗಲಿ, ಕಡಿಮೆ ಲೆವಿ ಮಾಡಿದ್ದರೆ, ಅದಕ್ಕೆ ಒಪ್ಪಿಗೆ ಕೊಟ್ಟಿದ್ದರೆ ಅವನಿಂದ ವಸೂಲು ಮಾಡುವುದಕ್ಕೆ ಈಗಿರತಕ್ಕಂಥ ಕಾನೂನಿನಲ್ಲಿ ಅವಕಾಶವಿದೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಒಬ್ಬ ಮಂತ್ರಿ ತನ್ನ ಹೆಂಡತಿ ಹೆಸರಿಗೆ ೧೦ ಲಕ್ಷ ರೂಪಾಯಿಗಳ ಬೆಲೆಯುಳ್ಳ ಪ್ರಾಪರ್ಟಿಯನ್ನು ೫ ಲಕ್ಷ ರೂಪಾಯಿಗೆ ಖರೀದಿ ಮಾಡಿ ರಿಜಿಸ್ಟರ್ ಮಾಡಿರತಕ್ಕಂಥದ್ದು ಇರುತ್ತದೆ. ೫ ಲಕ್ಷ ರೂಪಾಯಿಗಳ ಸ್ಟಾಂಪ್ ಡ್ಯೂಟಿಯನ್ನು ಕೊಟ್ಟಿರುವ ಬಗ್ಗೆ ಅರ್ಜಿಗಳನ್ನು ಬರೆದರೂ ಸಹ ಏನು ಕ್ರಮವನ್ನು ನಮ್ಮ ಸರ್ಕಾರದವರು ತೆಗೆದುಕೊಂಡಿಲ್ಲ. ಅಂಥ ಸಂದರ್ಭಗಳಲ್ಲಿ ತಮ್ಮ ಗಮನಕ್ಕೆ ತಂದರೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ? ಅವರ ಮೇಲೆ ಪ್ರಾಸಿಕ್ಯೂಸ್ ಮಾಡಿ ಕ್ರಮವನ್ನು ತೆಗೆದುಕೊಳ್ಳಲು ಕಾನೂನನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಸದಸ್ಯರು ಒಹಳ ಜವಾಬ್ದಾರಿಯುತವಾದ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರು ಎಷ್ಟು ಜವಾಬ್ದಾರಿಯುತವಾದ ಮಾತುಗಳನ್ನು ಹೇಳಿರುತ್ತಾರೆಯೋ ಅಷ್ಟೇ ಜವಾಬ್ದಾರಿಯುತವಾಗಿ ಸರ್ಕಾರ ಉತ್ತರವನ್ನು ಕೊಡಬೇಕಾಗಿರುತ್ತದೆ.

ಶ್ರೀ ಜೆ.ಎಚ್. ಪಟೀಲ್.—ಈವತ್ತಿನ ದಿವಸ ನಮ್ಮ ದೇಶದಲ್ಲಿ ಸಬ್ ರಿಜಿಸ್ಟ್ರಾರ್ ಎಂದರೆ ಲಂಚ ತೆಗೆದುಕೊಳ್ಳತಕ್ಕಂಥಾದ್ದು ಜನ ಸಾಮಾನ್ಯವಾಗಿರುತ್ತದೆ. ಸ್ಪಷ್ಟವಾಗಿ ಲಂಚ ತೆಗೆದುಕೊಳ್ಳತಕ್ಕಂಥ ಅಧಿಕಾರಿಗಳು ಎನ್ನುವುದು ಎಲ್ಲರಿಗೂ ತಿಳಿದಂಥ ವಿಷಯವಾಗಿರುತ್ತದೆ. ಎಂಥ ಅಪಲತ್‌ಕಾರನು ಹೋದರೂ ಕೂಡ ರಿಜಿಸ್ಟ್ರೇಷನ್‌ಗೆ ಇಂತಿಷ್ಟು ಹಣವನ್ನು ಕೊಡಬೇಕೆಂದು ಒಂದು ಕಂರಾರುವಾಕ್ ಫಿಕ್ಸ್ ಮಾಡಿರುತ್ತಾರೆ. ಅದು ಡಾಕ್ಟರ್‌ಗಳಿಗೂ, ಇಂಜಿನೀಯರ್‌ಗಳಿಗೂ ಯಾವ ರೇಟ್ ಇರುವುದಿಲ್ಲ. ಅದು ಏತಕ್ಕೆಂದರೆ ಮಂತ್ರಿಗಳಿಗೆ ಇಂತಿಷ್ಟು ಹಣವೆಂದು ಇನ್‌ಸ್ಟಾಲ್‌ಮೆಂಟ್ಸ್ ಕಳುಹಿಸಿಕೊಡಬೇಕಾಗಿರುತ್ತದೆ ಅದಕ್ಕಾಗಿ ಅವರೇನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅದನ್ನೇನಾದರೂ ರೆಗ್ಯುಲರೈಸ್ ಮಾಡಿದರೆ ಅವರಿಗೆ ಅನುಕೂಲವಾಗಬಹುದು. ಮತ್ತೆ ಮಂತ್ರಿಗಳ ಹೆಸರು ಹೇಳಿದರೆ ಬೇರೆ ರೀತಿ ಆದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ದೇವೇಗೌಡರು ಮಾತನಾಡುತ್ತಾ ಮಂತ್ರಿಗಳಾಗಿರತಕ್ಕಂಥ ಒಬ್ಬ ವ್ಯಕ್ತಿ ಆತನು ತನ್ನ ಹೆಂಡತಿಯ ಹೆಸರಿನಲ್ಲಿ ಪ್ರಾಪರ್ಟಿ ಮಾಡಿರತಕ್ಕಂಥ ವಿಷಯವನ್ನು ಬಹಳ ಜವಾಬ್ದಾರಿಯಿಂದ ಹೇಳಿರುತ್ತಾರೆ. ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ, ಯಾರು ಅಂಥ ಮಂತ್ರಿ ಎನ್ನುವುದು ನನಗೆ ಗೊತ್ತಿಲ್ಲ. ಅದು ಅವರ ಹತ್ತಿರ ಇರತಕ್ಕಂಥ ವಿಷಯವಾಗಿರುತ್ತದೆ. ಮಾನ್ಯ ಸದಸ್ಯರು ಯಾರೋ ಒಬ್ಬ ಮಂತ್ರಿ ಎಂದು ಹೇಳಿದರೇ ಹೊರತು ಅವರ ಹೆಸರನ್ನು ಹೇಳಲಿಲ್ಲ ಅಂಥ ವಿಷಯವನ್ನು ಬಹಿರಂಗಪಡಿಸುವುದು ದೇಶಕ್ಕೂ ಒಳ್ಳೆಯದೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಏತಕ್ಕೆಂದರೆ ನಾವು ಸರ್ಕಾರದ ಮಂತ್ರಿಯಾಗಿದ್ದುಕೊಂಡು ಅವರನ್ನು ಉಳಿಸುವುದ ಕ್ಕೋಸ್ಕರವಾಗಿ ನಮ್ಮನ್ನು ಜನತೆ ಚುನಾಯಿಸಿ ಕಳುಹಿಸಿಕೊಟ್ಟಿಲ್ಲ. ಅವರು ಮಾಡಿರತಕ್ಕಂಥ ತಪ್ಪಿಗೆ ನಮ್ಮ ಮೇಲೆ ಹೊರಿಸುವುದು ಸರಿಯಲ್ಲ ಪ್ರಜಾಪ್ರಭುತ್ವದಲ್ಲಿ ಜನತೆಯಲ್ಲಿ ವಿಶ್ವಾಸ ಮೂಡಿಸಬೇಕಾದರೆ ಮಾನ್ಯ ದೇವೇಗೌಡರು ಹೇಳಿದರು ಯಾರೋ ಒಬ್ಬ ಮಂತ್ರಿ ತನ್ನ ಹೆಂಡತಿಯ ಹೆಸರಿನಲ್ಲಿ ಪತ್ರವನ್ನು ತಪ್ಪುತಪ್ಪಾಗಿ ಮಾಡಿದ್ದರೆ, ಆಕಸ್ಮಾತ್ತಾಗಿ ಮಂತ್ರಿಯಾಗಿದ್ದವನೊಡನೆ ಷರಿಕ್ಕಾಗಿ ಅಧಿಕಾರಿಯಾದವನು ನಡೆದುಕೊಂಡಿದ್ದರೆ, ಅಥವಾ ಅವನನ್ನು ಹೆದರಿಸಿಯಾದರೂ ಈ ರೀತಿಯಾದ ಒಂದು ಅಕ್ರಮ ನಡೆದಿದ್ದರೆ ಅದಕ್ಕಾಗಿಯೇ ಇಂಥ ಒಂದು ಕಾನೂನನ್ನು ತರದೆ ತರತಕ್ಕಂಥಾದ್ದಾಗಿರುತ್ತದೆ. ಅದು ೧೯೭೨ನೇ ಇಸವಿಯಿಂದ ಮಾತ್ರವಲ್ಲ, ೧೯೬೦ನೇ ಇಸವಿಯಿಂದಲೇ ತರಬೇಕ್ಕಾಗಿತ್ತು ಎಂಬ ಅಭಿಪ್ರಾಯವಾಗಿರುತ್ತದೆ. ಏತಕ್ಕೆಂದರೆ ಮಂತ್ರಿಯಾಗಿರತಕ್ಕಂಥವರು ಯಾವಾಗಲೂ ಖಾಯಂ ಆಗಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಬದಲಾವಣೆಗಳಾಗುತ್ತಿರುತ್ತವೆ, ಅನೇಕ ರಾಜಕಾರಣಗಳು ನಡೆಯುತ್ತಿರುತ್ತವೆ,

ಈಗ ಮಂತ್ರಿಯಾಗಿರತಕ್ಕವನು ಮಾಜಿ ಮಂತ್ರಿಯಾಗಲೇಬೇಕಾಗಿರುತ್ತೆ. ಆದರೆ ಕಾನೂನು ಮಾತ್ರ ಏನೂ ಬದಲಾವಣೆಯಾಗುವುದಿಲ್ಲ. ಯಾವುದೇ ಅಕ್ರಮಗಳು ನಡೆದಿದ್ದರೆ ಅದು ಪತ್ರ ಹೇಳುತ್ತದೆಯೇ ಹೊರತು ವ್ಯಕ್ತಿ ಹೇಳುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ದೇವೇಗೌಡರು ಹೇಳಿದಂಥ ವಿಚಾರ ಒಂದು ಹೈಪೊತೆಟಿಕಲ್ ಪ್ರಶ್ನೆಯಾಗಿರುತ್ತದೆ. ಯಾರೋ ಒಬ್ಬ ಮಂತ್ರಿ ತನ್ನ ಹೆಂಡತಿಯ ಹೆಸರಿನಲ್ಲಿ ರಿಜಿಸ್ಟರ್ ಮಾಡಿದ್ದಾರೆಂದು ಹೇಳಿದರು. ಅವರು ನೇರವಾಗಿ ಹೇಳಲಿ. ಧೈರ್ಯವಿದ್ದರೆ ಇಂಥವರೇ ಹೀಗೆ ಮಾಡಿದ್ದಾರೆಂದು ಹೇಳಲಿ, ಮತ್ತು ಏನು ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳುತ್ತೀರೆಂದು ಕೇಳಲಿ. ಸಭೆಯ ಮುಂದೆ ಇರತಕ್ಕಂಥ ಪ್ರಶ್ನೆಗೂ ಅವರು ಮಾತನಾಡತಕ್ಕಂಥಾದ್ದಕ್ಕೂ ಯಾವ ಸಂಬಂಧವೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ —ಏತಕ್ಕೆ ಸಂಬಂಧವಿಲ್ಲವೆಂದು ಹೇಳುತ್ತೀರಿ. ಸಂಬಂಧವಿದೆ.

ಶ್ರೀ ಬಸವಲಿಂಗಪ್ಪ.—ಅವರು ಬವಿಷ್ಯವನ್ನು ಇಟ್ಟುಕೊಂಡು ಹಾಗೆ ಹೀಗೆ ಎಂದು ಹೇಳುವುದಕ್ಕೆ ಬದಲಾಗಿ ಇಂಥ ಮಂತ್ರಿಗಳು ಎಂಬುದನ್ನು ಧೈರ್ಯವಾಗಿ ಹೇಳಲಿ ಎಂದು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಬಸವಲಿಂಗಪ್ಪನವರು ಧೈರ್ಯವಿಲ್ಲವೆಂದು ಹೇಳಿದರು. ಸಮಯ ಬಂದಾಗ ಧೈರ್ಯ ಪ್ರದರ್ಶನ ಮಾಡುವುದಾಗುತ್ತದೆ. ಆದರೆ ಧೈರ್ಯ ಪ್ರದರ್ಶನ ಮಾಡುವುದು ಹೇಗೆ ಪ್ರದರ್ಶನ ಮಾಡಬೇಕು ಎನ್ನುವುದನ್ನಾದರೂ ಹೇಳಲಿ ಏತಕ್ಕೆಂದರೆ ದೇವೇಗೌಡರು ಪದೇ ಪದೇ ಹೇಳುತ್ತಲೇ ಇರುತ್ತಾರೆ, ಕೂಗಾಡುತ್ತಲೇ ಇರುತ್ತಾರೆ, ಆದರೆ ಅವರು ಹೇಳಿದಮೇಲೆ ಯಾವುದರ ಬಗ್ಗೆಯೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆಂದು ಹೇಳುತ್ತಾರೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ದೇವೇಗೌಡರಿಗೆ ಧೈರ್ಯವಿಲ್ಲವೆಂದು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ, ಧೈರ್ಯವಿದೆ ಆದರೆ ರಾಜಕೀಯ ಮಾಡುವುದಕ್ಕೆ ಬುದ್ಧಿ ಇಲ್ಲವೆಂದು ಹೇಳುತ್ತೇನೆ.

ಚೇರ್‌ಮೆನ್.—ಬೇರೆ ಬೇರೆಯವರು ಬೇರೆ ಬೇರೆ ರೀತಿಯಾದ ಅಭಿಪ್ರಾಯಗಳನ್ನು ಹೊಂದಿರುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟು ನನ್ನ ಹತ್ತಿರ ಅದರ ಕಾಪಿಯನ್ನೂ ಕೂಡ ಇಟ್ಟುಕೊಂಡಿರುತ್ತೇನೆ. ಇಂಥಿಂಥವರು ಇಂಥಿಂಥ ತಪ್ಪುಗಳನ್ನೂ ಮಾಡಿರುತ್ತಾರೆಂದು ಸರ್ಕಾರಕ್ಕೆ ನೇರವಾಗಿ ಆಪಾದನೆ ಮಾಡಿ ಅರ್ಜಿಯನ್ನೂ ಬರೆದಿದ್ದರೂ ಕೂಡ ಯಾವ ವಿಧವಾದ ಚಕಾರವನ್ನೂ ಕೊಡ ಎತ್ತಿಲ್ಲ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಒಂದು ಕಹಿ ವಾತಾವರಣವನ್ನು ಉಂಟು ಮಾಡಬೇಕು ಎಂದು ಹೇಳುತ್ತಾ ಇಲ್ಲ. ನಮ್ಮ ದೇಶದ ಜನರ ಒಂದು ಪ್ರಶ್ನೆಯಾಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಕಹಿ ವಾತಾವರಣದ ಪ್ರಶ್ನೆಯೇ ಬರುವುದಿಲ್ಲ, ಕಾನೂನು ಇದೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಪದೇ ಪದೇ ಹೇಳುತ್ತಲೇ ಇದೇನೆ. ಸರ್ಕಾರ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಟ್ಟರೆ ಸಾಕ್ಷಿ, ಸಾಹಿತ್ಯಗಳ ಆದಾರ ಸಹಿತ ನಾಲ್ಕಾರು ಘಟನೆಗಳನ್ನು ಕೊಡುವುದಕ್ಕೆ ತಯಾರಾಗಿದ್ದೇನೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದೆ.....

ಚೇರ್‌ಮೆನ್ —ಈಗ ನೀವು ಕೊಡಬೇಕಾದ ಉತ್ತರ ಇಷ್ಟೆ. ಮಾನ ದೇವೇಗೌಡರು ಏನು ಮಾಹಿತಿ ಅಥವಾ ಸಾಹಿತ್ಯ ಒದಗಿಸುವ ವಿಷಯ ಹೇಳಿದ್ದಾರೆ, ಅಷ್ಟಕ್ಕೆ ಉತ್ತರ ಕೊಟ್ಟರೆ ಸಾಕು ಎಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ದೇವೇಗೌಡರು ಅವರ ಒಂದು ಶೈಲಿಯಲ್ಲಿ ಮಾತನಾಡಿದ್ದಾರೆ, ನಾವು ಎಷ್ಟು ಕೆಣಕಿದರೂ ಕೂಡ ಅವರ ಧೈರ್ಯ ಪ್ರದರ್ಶನ ಮಾಡಲಿಲ್ಲ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಇರತಕ್ಕಂಥ ಎರಡು ದಾರಿ ಏನು ಎಂದರೆ ಹೆಸರು ಕೊಟ್ಟಿದ್ದೇ ಆದರೆ ಅದನ್ನು ಬಹಿರಂಗ ಪಡಿಸಿ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಮೊದಲೇ ಹೇಳಿದ್ದೇನೆ, ಇನ್ನು ಎರಡನೆಯದು ಮಾನ್ಯ ಸದಸ್ಯರಿಗೆ ಏನಂ ಗೊತ್ತಿದೆ ಅದರ ವಿವರ

ಗಳನ್ನು ಮತ್ತು ಹೆಸರನ್ನು ಕೊಟ್ಟರೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ, ಇನ್ನು ಉಳಿದಿರತಕ್ಕಂಥ ವಿಷಯ ಮಾನ್ಯ ಸದಸ್ಯರಿಗೆ ಬಿಟ್ಟಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮತ್ತೆ ಪುನಃ ಈ ಸಭೆಯಲ್ಲಿ ಕಹಿ ವಾತಾವರಣ ನಿರ್ಮಾಣ ಮಾಡಲು ನನಗೆ ಇಷ್ಟವಿಲ್ಲ. ಆದರೆ ಸರ್ಕಾರದ ಕಡತದಲ್ಲಿ ಮಾನ್ಯ ಬಸವಲಿಂಗಪ್ಪನವರ ನಾಯಕರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಾವು ಬರೆದುಕೊಟ್ಟು ವಿಚಾರಣೆಗಳಾಗಿ, ನಿಮ್ಮ ಸರ್ಕಾರಕ್ಕೆ ಸಿ. ಓ. ಡಿ. ರಿಪೋರ್ಟು ಬಂದಿರುವುದು ಇದೆ. ಆದರಲ್ಲಿ ಯಾರು ಎಷ್ಟು ಪ್ರಾಪರ್ಟಿ ಇದೆ ಎನ್ನುವುದು ಇದೆ ನೀವು ಕ್ರಮ ತೆಗೆದುಕೊಳ್ಳುವುದಾದರೆ ನಿಮ್ಮ ಚೀಫ್ ಸೆಕ್ರಟರಿಯವರಿಗೆ ಹೇಳಿದರೆ ತಂದು ಕೊಡುತ್ತಾರೆ. ನೀವು ಕ್ರಮ ತೆಗೆದುಕೊಳ್ಳದೆ ಹೋದರೆ ಮತ್ತೆ ಕಾಗದ ಬರೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ. ಕಾನೂನು ಇದೆ ನೀವು ಬರೆಯಿರಿ ಕ್ರಮ ತೆಗೆದುಕೊಳ್ಳುತ್ತೇವೆ, ಸಂಪೂರ್ಣವಾಗಿ ಕ್ರಮ ತೆಗೆದುಕೊಂಡು ಏನು ಕ್ರಮ ತೆಗೆದುಕೊಳ್ಳುತ್ತೇವೆ ಅದನ್ನು ತಮಗೂ ಬರೆದು ತಿಳಿಸುತ್ತೇವೆ. ಇನ್ನು ಮಾನ್ಯ ಅಧ್ಯಕ್ಷರೆ, ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಅಂಡರ್ ಹ್ಯಾಂಡ್ ಡೀಲಿಂಗ್ ಮತ್ತು ಲಂಚ ಏನು ಇದೆ ಎನ್ನುವುದನ್ನು ನಾನು ಅಲ್ಲಗಳೆಯುತ್ತಿಲ್ಲ. ಮಾನ್ಯ ಸದಸ್ಯರಾದ ಜೆ. ಎಚ್. ಪಟೇಲ್ ರವರು ಹೇಳುವ ರೀತಿಯಲ್ಲಿ ಅದನ್ನು ರೆಗ್ಯುಲರೈಸ್ ಮಾಡುವುದು ಒಳ್ಳೆಯದು ಎಂದು. ಆದರೆ ನಾನೂ ಕೂಡ ಸ್ವಲ್ಪವೂ ಅಲ್ಲಿ ಲಂಚ ಇಲ್ಲವೆಂದು ಹೇಳುವ ಅಭಿಪ್ರಾಯವುಳ್ಳವನಲ್ಲ. ಅದು ನನ್ನ ಗಮನಕ್ಕೂ ಬಂದಿದೆ ಸರ್ಕಾರದ ಗಮನಕ್ಕೂ ಬಂದಿದೆ, ಆದರೆ ಎಲ್ಲಾ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದೆ ಎಂದು ತಿಳಿಯುವುದು ಬೇಡ. ಎಲ್ಲಿ ಆ ರೀತಿ ಲಂಚ ಭ್ರಷ್ಟಾಚಾರಗಳಿವೆ, ಅದರ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳೋಣ ಸರ್ಕಾರ ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.–ಶ್ರೀಬಸವಲಿಂಗಪ್ಪನವರು ಈ ಬಗ್ಗೆ ಬಹಳ ನಡೆಸಿದರು. ಅವರೂ ಕೂಡ ಸರಿ ಮಾಡುವುದಕ್ಕೆ ಹೋಗಿದ್ದರು ಮತ್ತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾರದೋ ಜಮೀನು ಕಿತ್ತುಕೊಳ್ಳಬೇಕೆಂದು ಹೋಗಿದ್ದರು. ಆದರೆ ಆಗಲಿಲ್ಲ., ಬಿಟ್ಟು ಬಿಟ್ಟೆ ಎಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ,—ನಮ್ಮ ಮುಂದೆ ಇರತಕ್ಕಂಥ ವಿಷಯ ಸ್ಟ್ಯಾಂಪ್ ಆಕ್ಟ್‌ಗೆ ತಿದ್ದುಪಡಿ ಆದರೆ ಪ್ಲಾಂಟರ್ ಬಗ್ಗೆ ಮಾತನಾಡಲಿಕ್ಕೆ ಹೊರಟ್ಟಿದ್ದಾರೆ, ಅವರು ಲಾರಿ ಇದ್ದ ಹಾಗೆ ದೊಡ್ಡ ದೊಡ್ಡ ಪ್ರಭಾವಿ ವ್ಯಕ್ತಿಗಳು ಮತ್ತು ಮಾಜಿ ಮಂತ್ರಿಗಳು ಎಂದು ಹೇಳುತ್ತಾರೆ ಹಾಲಿ ಮಂತ್ರಿ ಇದ್ದರೂ ಅವರು ಒಂದು ದಿವಸ ಮಾಜಿ ಮಂತ್ರಿಗಳಾಗ ಬೇಕು ಯಾವಾಗಲೂ ಹಾಲಿ ಇರಲಿಕ್ಕೆ ಸಾಧ್ಯವಿಲ್ಲ ಮಾನ್ಯ ದೇವೇಗೌಡರು ತಂದಿರತಕ್ಕಂಥ ವಿಷಯ ಬಹಳ ಉಪಯುಕ್ತ ಹಾಗೂ ಅದಕ್ಕೋಸ್ಕರ ವಾಗಿ ಈ ಒಂದು ತಿದ್ದುಪಡಿಯನ್ನು ನಾವು ತಂದಿದ್ದೇವೆ ಮಾನ್ಯ ಸದಸ್ಯರೆಲ್ಲರೂ ಸ್ವಾಗತಮಾಡಿದ್ದಾರೆ ಜೊತೆಗೆ ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ, ಇನ್ನು ಲೀಸ್ ಕಂ ಸೇಲ್ ಬಗ್ಗೆ ಕೂಡ ಸಲಹೆ ಕೊಟ್ಟಿದ್ದಾರೆ, ನಾವು ಒಂದು ಅಮೆಂಡ್‌ಮೆಂಟ್ ತಂದಿರುವುದು ಫುಲ್ ಡ್ಯೂ ಕಲೆಕ್ಟ್ ಮಾಡುವುದ ಕ್ಕಾಗಿ ಆದರಲ್ಲಿ ಅನುಮಾನ ಬರಬಾರದು ಎಂದು ಸಾಂಧರ್ಬಿಕವಾಗಿ ಪ್ರಸ್ತಾಪಮಾಡಿದ್ದೇನೆ ಅಷ್ಟೇ ತಾವುಗಳು ಎಲ್ಲಾ ಇದಕ್ಕೆ ಬೆಂಬಲ ಕೊಡುತ್ತೀರೆಂದು ತಿಳಿದಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಈ ಕಾನೂನನ್ನು ೧೯೭೨ ರಿಂದ ಜಾರಿಗೆ ತರುತ್ತೇವೆ ಎಂದು ಹೇಳಿದ್ದೀರಿ ಅದು ಏತಕ್ಕೆ? ಆ ವರ್ಷದಲ್ಲಿ ಒಂದು ಸರ್ಕಾರ ಬಂತು. ಆವರನ್ನು ಉಳಿಸುವುದಕ್ಕೇನು ? ಅದಕ್ಕೂ ಹಿಂದಕ್ಕೆ ಹೋಗುವುದಕ್ಕೆ ಆಗಲಿಲ್ಲವೆ ? ಇನ್ನು ಲ್ಯಾಂಡ್ ರೆವಿನ್ಯೂ ಗೊತ್ತು ಮಾಡುವ ವಿಚಾರದಲ್ಲಿ ಎರಡು ವಿಚಾರಗಳು ಇವೆ. ಒಂದು ೧೯೭೨ ರಲ್ಲಿ ೧೦ ಸಾವಿರ ರೂಪಾಯಿ ಪ್ರಾಪರ್ಟಿಯನ್ನು ಒಂದು ಸಾವಿರ ರೂಪಾಯಿಗೆ ಮಾರಿರುತ್ತಾನೆ. ಅದೇ ೭೫ನೇ ಇಸವಿಯಲ್ಲಿ ೫ ಸಾವಿರಕ್ಕೆ ಮಾರಿದ್ದಾನೆ ಎಂದು ಇಟ್ಟುಕೊಳ್ಳೋಣ ಲ್ಯಾಂಡ್ ರೆವಿನ್ಯೂ ವಸೂಲುಮಾಡುವುದಾದರೆ ಅದನ್ನೇ ೧೫ ರೂಪಾಯಿಗೆ ೧೯೭೫ರಲ್ಲೆ ಕೊಂಡುಕೊಂಡಿದ್ದಾನೆ ಮತೊಬ್ಬ ೧೯೭೫ ರಲ್ಲಿ ಕ್ರಯಕ್ಕೆ. ಆದರೆ ಟೆನೆನ್ಸಿ ಆಕ್ಟ್ ಬಂತು ಆಗ ಸಿಕ್ಸ್‌ಟಿಸ್ ಡ್ಯೂಟಿ ಮತ್ತೆ ಲ್ಯಾಂಡ್ ರೀ ಫಾರಂ ಆಕ್ಟ್ ಪ್ರಕಾರ ಗುತ್ತಿಗದಾರನಿಗೆ ತೊಂದರೆ ಬರುವುದಿಲ್ಲವೇ ? ಈ ತರಹ ಲ್ಯಾಂಡ್ ರೆವಿನ್ಯೂ ಕಾನೂನು ಪ್ರಕಾರ ವಸೂಲು ಮಾಡುವುದಾದರೆ ಯಾವನು ಆಸ್ತಿ ಕೊಂಡುಕೊಂಡಿರುತ್ತಾನೆ ಅವನ ಮಗ ಆದರಲ್ಲಿ ಆಷ್ಟು ಉತ್ಪತ್ತಿಯಾಗದೆ ಹೋದರೆ ಅವನಿಗೆ ಕಷ್ಟವಾಗುವುದಿಲ್ಲವೆ ? ಇದನ್ನು ೭೫ನೇ ಇಸವಿಯಿಂದ ಜಾರಿಗೆ ತರಬೇಕೆನ್ನುವ ಮೂಲ

ಉದ್ದೇಶ ಏನು ? ಕೊನೆಯದು ಶ್ರೀಮಾನ್ ದೇವೇಗೌಡರು ಹೇಳಿದ ಮಾಜಿ ಮಂತ್ರಿಗಳ ವಿಷಯದಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳತ್ತೀರಿ ? ಶಿಕ್ಷೆಯನ್ನೇನಾದರೂ ಕೊಡುತ್ತೀರಾ ಅಥವಾ ಅವರಿಗೆ ಮಂತ್ರಿ ಪದವಿ ಕೊಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಗೊಂದಲಕ್ಕೆ ಅವಕಾಶವಿಲ್ಲ. ಸೆಕ್ಷನ್ ೪೫ ಏನಿದೆ ಅದು ೧೯೭೫ ರಿಂದ ಜಾರಿಗೆ ಬರುತ್ತದೆ. ಅಂಡರ್‌ವ್ಯಾಲ್ಯೂ ಮಾಡಿರುವ ಪ್ರಕರಣಗಳು ಇದಕ್ಕೆ ಅನ್ವಯಿಸುತ್ತದೆ. ಆದರೆ, ಕೊಲ್ಯೂಷನ್ ಆಗಿರುವ ಪ್ರಕರಣಗಳು ೧೯೭೨ ರಿಂದ ಜಾರಿಗೆ ಬರುತ್ತವೆ, ಆದುದರಿಂದ ಇದರಲ್ಲಿ ಯಾವ ಗೊಂದಲಕ್ಕೂ ಅವಕಾಶವಿಲ್ಲ.

CHAIRMAN.—The question is :

"That the Karnataka Stamp(Amendment) Bill 1980 be taken into consideration."

The Motion was adopted

CLAUSES 2 TO 4

CHAIRMAN.—The question is :

"That clauses 2 to 4, both inclusive, do stand part of the Bill."

The motion was adopted

Clauses 2 to 4 both inclusive were added to the Bill

CLAUSE 1, ETC,

CHAIRMAN.—The question is ;

"That Clause 1, the Long Title, the Preamble and the Enacting Formula do stand part of the Bill."

The motion was adopted

Clause, 1 the Long Title the Preamble and the Enacting Formula were added to the Bill

Motion to Pass

SRI S. BANGARAPPA(Minister for Revenue and Agriculture).—Sir, I beg to move—

"That the Karnataka Stamp (Amendment) Bill, 1980 be passed."

CHAIRMAN.—The question is :

"That the Karnataka Stamp (Amendment) Bill, 1980 be passed."

The Motion was adopted and the Bill was passed.